ನಿಮ್ಮ ಪುಟ

# ವಿಷವರ್ತುಲದಲ್ಲಿ ನಾವು ನೀವು



ಈ ಚಿತ್ರದಲ್ಲಿರುವ ಬಣ್ಣಬಣ್ಣದ ಹಕ್ಕಿಗಳು ಹೊಲಗದ್ದೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ರೈತೋಪಕಾರಿಗಳಾಗಿ ಹಗಲಿರುಳು ದುಡಿಯುವ ಈ ಹಕ್ಕಿಗಳು ಹೀಗೆ ರೆಕ್ಕೆ ಬೀಸದೇ ನಿಶ್ಚಲಗೊಳ್ಳಲು ಕಾರಣ, ಕ್ರಿಮಿನಾಶಕಗಳು. ಹೊಲಗದ್ದೆಗಳಲ್ಲಿ ಯಥೇಚ್ಛವಾಗಿ ಬಳಸುವ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳು ಈ ಪಕ್ಷಿಗಳ ನೈಸರ್ಗಿಕ ಆಹಾರ ಮತ್ತು ನೀರನ್ನು ವಿಷಗೊಳಿಸುತ್ತಿವೆ. ಇವನ್ನು ಸೇವಿಸಿದ ಹಕ್ಕಿಗಳು ಸಾವನ್ನಪ್ಪುತ್ತಿವೆ. ಈ ಹಕ್ಕಿಗಳನ್ನು ತಿನ್ನುವ ಕಾಡುಬೆಕ್ಕು, ನರಿ, ಮುಂಗುಸಿಗಳೂ ಅಸ್ವಸ್ಥಗೊಳ್ಳುತ್ತಿವೆ.

ಹಕ್ಕಿಗಳಲ್ಲದೇ ಮೊಲಗಳು, ಅಳಿಲುಗಳೂ ಈ ಕ್ರಿಮಿನಾಶಕಕ್ಕೆ ಬಲಿಯಾಗುತ್ತಿವೆ. ಇವುಗಳನ್ನು ಬೇಟೆಯಾಡಿ ತಿನ್ನುವ ಮನುಷ್ಯರು ಕೂಡ ವಿಷದ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಹೇಗಿದೆ ನೋಡಿ ಈ ವಿಷಚಕ್ರ? ಮನುಷ್ಯ ಸೃಷ್ಟಿಸಿದ ಈ ವಿಷಜಾಲ ಮನುಷ್ಯನ ಕೊರಳನ್ನೇ ಸುತ್ತಿಕೊಂಡಿದೆ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ



# ‘ಬರ್ಡ್‌ ಆಫ್‌ ಪ್ಯಾರಡೈಸ್‌’ ಪುಷ್ಪ

ಗಿಡ, ಮರಗಳ ಮೇಲೆ ಹಕ್ಕಿಗಳು ಕುಳಿತು ವಿಶ್ರಾಂತಿ ಪಡೆಯುವುದು ಸಾಮಾನ್ಯ. ಆದರೆ ಇಲ್ಲೊಂದು ಹೂ, ಹಕ್ಕಿಯ ಮಾದರಿಯಲ್ಲೇ ಇದ್ದು, ಗಿಡದ ಮೇಲೆ ಹಕ್ಕಿ ಯಾವಾಗಲೂ ಕುಳಿತಂತೆ ಕಾಣುತ್ತದೆ.

ಈ ಹೂವು, ಮಲೆನಾಡು, ಕರಾವಳಿ ಭಾಗದಲ್ಲಿ ಕಂಡುಬರುವ ‘ಬರ್ಡ್‌ ಆಫ್‌ ಪ್ಯಾರಡೈಸ್‌’ ಹಕ್ಕಿಯನ್ನು ಹೋಲುವುದರಿಂದ ‘ಬರ್ಡ್‌ ಆಫ್‌ ಪ್ಯಾರಡೈಸ್‌ ಪುಷ್ಪ’ ಎಂದೇ ಕರೆಯಲಾಗುತ್ತದೆ. ಗಾಢ ಕೇಸರಿ ಬಣ್ಣದ ಈ ಹೂವು ಎಲ್ಲೇ ಇದ್ದರೂ ಎದ್ದು ಕಾಣುತ್ತದೆ.

ಇದರ ಮೂಲ ದಕ್ಷಿಣ ಆಫ್ರಿಕಾ ಎಂದು ಹೇಳಲಾಗಿದೆ. ಕರಾವಳಿ, ಮಲೆನಾಡು ಭಾಗದ ತೋಟಗಳಲ್ಲಿ ಇದು ಯಥೇಚ್ಛವಾಗಿ ಕಂಡು ಬರುತ್ತದೆ. ಗಡ್ಡೆ ಸಸ್ಯವಾದ ಇದು 5 ಅಡಿ ಎತ್ತರದವರೆಗೂ ಗುಂಪಾಗಿ ಬೆಳೆಯುತ್ತದೆ. ಗಿಡದ ಮೇಲ್ಭಾಗದಲ್ಲಿ ಹೂ ಬಿಡುತ್ತದೆ. ಮಳೆಗಾಲ, ಚಳಿಗಾಲ, ಬೇಸಿಗೆಯಲ್ಲೂ ಹೂ ಅರಳುತ್ತದೆ. ಕೆಲ ದಿನಗಳ ಕಾಲ ಹೂ ಹಾಳಾಗದೆ ಹಾಗೇ ಇರುತ್ತದೆ. ತೋಟದ ಬೇಲಿಯಂಚಿನಲ್ಲಿ ಬೆಳೆಯುವ ಇದಕ್ಕೆ ಕಳೆ ಗಿಡದ ಸ್ಥಾನಮಾನ. ಆದರೂ ಈ ಹೂ ನೋಡುಗರ ಮನಸನ್ನು ಪ್ರಸನ್ನಗೊಳಿಸಬಲ್ಲದು.

–ಅರುಣ್‌ ಕಿಲ್ಲೂರು

# ಕಲ್ಲಿನಲ್ಲಿ ಹೆಣೆದ ನೀಳಕೇಶ

ನೀಳಕೇಶವಿರುವ ಹೆಣ್ಣು ಮಕ್ಕಳಿಗೆ ಜಡೆ ಹೆಣೆಯುವುದೇ ಕಷ್ಟ. ಉದ್ದ ಕೂದಲಿನ ಪುಟಾಣಿಗಳಂತೂ ಅಮ್ಮನನ್ನು ಗೋಳಾಡಿಸದೇ ಇರುವುದಿಲ್ಲ. ಆದರೂ ಅಚ್ಚುಕಟ್ಟಾಗಿ ಹೆಣೆದ ನೀಳಕೇಶ ಎಂದಿಗೂ ಚಂದ. ಇಂಥ ನೀಳಕೇಶವನ್ನು ಕಲ್ಲಿನಲ್ಲಿ ಕೆತ್ತಿರುವುದು ನೋಡಿ. ಎಷ್ಟು ನಾಜೂಕಾಗಿ ಜಡೆ ಹೆಣೆಯಲಾಗಿದೆ ಈ ಕಲ್ಲವೇಣಿಗೆ! ಭಾರತೀಯ ನಾರಿಯ ನೀಳಕೇಶವನ್ನು ಕಲ್ಲಿನಲ್ಲಿ ಯಥಾವತ್ ಚಿತ್ರಿಸಿದ್ದು ನೋಡಲು ಅತ್ಯಾಕರ್ಷಕವಾಗಿದೆ.

ಈ ಶಿಲೆ ತಮಿಳುನಾಡಿನ ಕುಡಲೂರ್ ಜಿಲ್ಲೆಯಲ್ಲಿನ ಶ್ರೀಮುಷ್ಣಂನ ಭೂವರಾಹ ಸ್ವಾಮಿ ದೇವಸ್ಥಾನದಲ್ಲಿದೆ. ಇದು ಸುಮಾರು ಸಾವಿರ ವರ್ಷ ಹಳೆಯದು. ಲಕ್ಷ್ಮಿದೇವಿಯ ಶಿಲೆಯಲ್ಲಿ ಕೆತ್ತಲಾದ ಈ ಕೇಶ ಶೈಲಿ, ನೋಡುಗರ ಕಣ್ಸೆಳೆಯುವಂತಿದೆ. ಭೂ ವರಾಹಸ್ವಾಮಿ ದೇವಸ್ಥಾನ ತಮಿಳುನಾಡಿನ ಅತ್ಯಂತ ಪ್ರಸಿದ್ಧ ದೇಗುಲಗಳಲ್ಲೊಂದು. ಈ ದೇವಾಲಯವನ್ನು ದ್ರಾವಿಡ ವಾಸ್ತುಶಿಲ್ಪದ ಶೈಲಿಯಲ್ಲಿ ಕಟ್ಟಲಾಗಿದೆ. ಇದನ್ನು ವರಾಹ ರೂಪದಲ್ಲಿರುವ ವಿಷ್ಣುವಿಗೆ ಸಮರ್ಪಿಸಲಾಗಿದೆ ಎನ್ನುವುದು ಇಲ್ಲಿನ ವಾಸ್ತುತಜ್ಞರ ಅಭಿಮತ.

–ಸುಮನಾ ಜಿ. ಪ್ರಸಾದ್, ಕೊಡುಂಗಾಯಿ

